KARNATAK UNIVERSITY
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ,
ವಿದ್ಯಾಮಂಡಳ (ಎಸ್&ಟಿ) ವಿಭಾಗ
website: kud.ac.in

NAAC Accredited
'A' Grade 2014

Tele: 0836-2215224
e-mail: academic.st@kud.ac.in

Pavate Nagar, Dharwad -580003
ಪಾವಟೆ ನಗರ, ಧಾರವಾಡ - 580003

No. KU/Aca(S&T)/BGM-215/BOS in Kanak peeth/2017-18/2325 Dated: 26 SEP 2017

ದಿನಾಂಕ: 22-09-2017 ರಂದು ಕನಕ ಅಧ್ಯಯನ ಪೀಠದ ಅಡ್-ಹಾಕ್ ಅಭ್ಯಾಸಸೂಚಿ ಮಂಡಳಿಯ ಸಭೆಯು ಮುಂಜಾನೆ 4.00 ಗಂಟೆಗೆ ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗದಲ್ಲಿ ಜರುಗಿತು. ಈ ಸಭೆಯಲ್ಲಿ ಕೆಳಗಿನ ಸದಸ್ಯರು ಹಾಜರಿದ್ದರು.

1) ಡಾ. ಬಿ.ಎಲ್. ನಡೋಣಿ – ಅಧ್ಯಕ್ಷರು
2) ಡಾ. ಜೆ.ಎಂ.ನಾಗಯ್ಯ – ಸದಸ್ಯರು
3) ಡಾ. ಬಿ.ವಿ. ಯಕ್ಕುಂಡಿಮಠ – ಸದಸ್ಯರು

ಸಭೆಯ ನಿರ್ಣಯಗಳು (ಠರಾವುಗಳು)

ವಿಷಯ 1 : 2016-17ನೇ ಸಾಲಿನ ಸ್ನಾತಕೋತ್ತರ ಕನಕ ಸಾಹಿತ್ಯ ಅಧ್ಯಯನದಲ್ಲಿ ಡಿಪ್ಲೋಮಾ ಕೋರ್ಸ್ ಮತ್ತು ಮುಕ್ತ ಆಯ್ಕೆ ವಿಷಯ(OEC)ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಪರಿಶೀಲಿಸುವ ಕುರಿತು.

ನಿರ್ಣಯ : 2016ರ ಡಿಸೆಂಬರ ಮತ್ತು 2017ರ ಮೇ/ಜೂನ್ ತಿಂಗಳಿನಲ್ಲಿ ಜರುಗಿದ ಡಿಪ್ಲೋಮಾ ಕೋರ್ಸ್ ಮತ್ತು ಮುಕ್ತ ಆಯ್ಕೆ ವಿಷಯ(OEC)ಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳನ್ನು ಪರಿಶೀಲಿಸಿ, ಪ್ರಶ್ನೆ ಪತ್ರಿಕೆಗಳು ಪಠ್ಯಕ್ರಮಕ್ಕನುಗುಣವಾಗಿ ಸರಿಯಾಗಿವೆ ಎಂದು ಸಭೆ ಅಭಿಪ್ರಾಯ ಪಟ್ಟಿತು.

ವಿಷಯ 2 : 2017-18ನೇ ಸಾಲಿನ ವಿವಿಧ ಪರೀಕ್ಷೆಗಳಿಗೆ ಸಂಬಂಧಿಸಿದ ಪರೀಕ್ಷಕರ ಯಾದಿ (ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದರ ಮತ್ತು ಮೌಲ್ಯಮಾಪಕರ)ಸಿದ್ಧಪಡಿಸುವ ಕುರಿತು.

ನಿರ್ಣಯ : 2017-18ನೇ ಸಾಲಿನ ವಿವಿಧ ಪರೀಕ್ಷೆಗಳಿಗೆ ಸಂಬಂಧಿಸಿದ ಪರೀಕ್ಷಕರ ಯಾದಿನ್ನು ಪರಿಶೀಲಿಸಿ, ಒಪ್ಪಿಗೆಯನ್ನಿತ್ತು ಪರೀಕ್ಷಕರ ಯಾದಿಯನ್ನು ಪರೀಕ್ಷಾ ವಿಭಾಗಕ್ಕೆ ಕಳಿಸಲು ಸಭೆ ಸೂಚಿಸಿತು.

ವಿಷಯ 3 : ಸ್ನಾತಕೋತ್ತರ ಕನಕ ಸಾಹಿತ್ಯ ಅಧ್ಯಯನದಲ್ಲಿ ಡಿಪ್ಲೋಮಾ ಕೋರ್ಸ್‌ನ ಪಠ್ಯಕ್ರಮದ (Syllabus)ಪರಿಷ್ಕರಣೆ ಕುರಿತು.

ನಿರ್ಣಯ : ಸ್ನಾತಕೋತ್ತರ ಕನಕ ಸಾಹಿತ್ಯ ಅಧ್ಯಯನದಲ್ಲಿ ಡಿಪ್ಲೋಮಾ ಕೋರ್ಸ್‌ಗೆ ಸಂಬಂಧಿಸಿದ ನಾಲ್ಕು ಪತ್ರಿಕೆಗಳ ಪಠ್ಯಕ್ರಮಗಳ ಕುರಿತು ಆಮೂಲಾಗ್ರವಾಗಿ ಚರ್ಚಿಸಿ, ನಾಲ್ಕು ಪತ್ರಿಕೆಗಳ ಪರಿಷ್ಕೃತ ಪಠ್ಯಕ್ರಮ(2018ನೇ ಶೈಕ್ಷಣಿಕ ವರ್ಷದಿಂದ)ವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ವಿದ್ಯಾಮಂಡಳ ವಿಭಾಗಕ್ಕೆ ಕಳಿಸಲು ನಿರ್ಣಯಿಸಲಾಯಿತು.

ವಿಷಯ 4 : ಮುಕ್ತ ಆಯ್ಕೆ ವಿಷಯ(OEC)ಕ್ಕೆ ಸಂಬಂಧಿಸಿದ ದ್ವಿತೀಯ(2ನೇ)ಸೆಮಿಸ್ಟರ್‌ದ ಪಠ್ಯಕ್ರಮದ ಪರಿಷ್ಕರಣೆ ಮತ್ತು ತೃತೀಯ(3ನೇ)ಸೆಮಿಸ್ಟರ್‌ಗೆ ಪಠ್ಯಕ್ರಮವನ್ನು ಸಿದ್ಧಪಡಿಸುವ ಕುರಿತು.

ನಿರ್ಣಯ : ಕಳೆದ ಐದು ವರ್ಷಗಳಿಂದ ಪ್ರಚಲಿತದಲ್ಲಿದ್ದ ಮುಕ್ತ ಆಯ್ಕೆ ವಿಷಯಕ್ಕೆ ಸಂಬಂಧಿಸಿದ ದ್ವಿತೀಯ ಸೆಮಿಸ್ಟರ್(2ನೇ) 'ಕನಕದಾಸರ ಜೀವನ ಮತ್ತು ಸಾಹಿತ್ಯ' ಪಠ್ಯಕ್ರಮವನ್ನು ಹೊಸ ಹೊಸ ಆಯಾಮ ಮತ್ತು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಪರಿಷ್ಕರಿಸಿದ ಪ್ರಸ್ತುತ ಪಠ್ಯಕ್ರಮವನ್ನು(2018ನೇ ಸಾಲಿನ ಶೈಕ್ಷಣಿಕ ವರ್ಷದಿಂದ)ಮುಂದಿನ ಕ್ರಮಕ್ಕಾಗಿ ವಿದ್ಯಾಮಂಡಳ ವಿಭಾಗಕ್ಕೆ ಕಳಿಸಲು ತೀರ್ಮಾನಿಸಲಾಯಿತು.

ಇದರಂತೆ ತೃತೀಯ(3ನೇ) ಸೆಮಿಸ್ಟರ್‌ಗೆ ಹೊಸದಾಗಿ ಸಿದ್ಧಪಡಿಸಿದ 'ಭಾರತೀಯ ಅನುಭಾವ ಪರಂಪರೆ ಮತ್ತು ಕನಕದಾಸರು' ಪಠ್ಯಕ್ರಮ(2018ನೇ ಶೈಕ್ಷಣಿಕ ಸಾಲಿನಿಂದ)ವನ್ನು ಮುಂದಿನ ಕ್ರಮಕ್ಕಾಗಿ ವಿದ್ಯಾಮಂಡಳ ವಿಭಾಗಕ್ಕೆ ಕಳಿಸಲು ತೀರ್ಮಾನಿಸಲಾಯಿತು.

ವಿಷಯ 5 : 2018-19ನೇ ಶೈಕ್ಷಣಿಕ ವರ್ಷದಿಂದ ಎಂ.ಎ.(ಕನಕ ಸಾಹಿತ್ಯ)ಕೋರ್ಸ್ ಪ್ರಾರಂಭಿಸುವ ಕುರಿತು ಹಾಗೂ ಪಠ್ಯಕ್ರಮದ ರೂಪುರೇಷೆಗಳ ಕುರಿತು.

26-03-2018-19

Scanned with Oken Scanner

ನಿರ್ಣಯ : ಎಂ.ಎ.(ಕನಕ ಸಾಹಿತ್ಯ)ಕೋರ್ಸ್‌ನ್ನು 2017-18ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸುವ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಪ್ರಸ್ತುತ ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಲು ಹಾಗೂ ಪಠ್ಯಕ್ರಮ ರಚಿಸಲು ಒಪ್ಪಿಗೆ ಸೂಚಿಸುವುದರೊಂದಿಗೆ ಪಠ್ಯಕ್ರಮದ ರೂಪುರೇಷೆಗಳನ್ನು ವಿದ್ಯಾಮಂಡಳಕ್ಕೆ ಕಳಿಸಲು ಸಭೆ ಸೂಚಿಸಿತು.

ಸಹಿ ಇದೆ/-
ಅಧ್ಯಕ್ಷರು
ಕನಕ ಅಧ್ಯಯನ ಪೀಠ ಅಡ್-ಹಾಕ್ ಅಭ್ಯಾಸ ಮಂಡಳಿ
ಕ.ವಿ.ವಿ. ಧಾರವಾಡ

ಗೆ,

1. ಡಾ. ಬಿ.ಎಲ್. ನಡೋಣಿ, (ಅಧ್ಯಕ್ಷರು) ಡೀನರು, ಕಲಾ ನಿಕಾಯ, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ.
2. ಡಾ. ಜೆ.ಎಂ.ನಾಗಯ್ಯ,(ಸದಸ್ಯರು), ಪ್ರೊಫೆಸರ್, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಕೇಂದ್ರ, ಕ.ವಿ.ವಿ., ಧಾರವಾಡ.
3. ಡಾ. ಬಿ.ವಿ. ಯಕ್ಕುಂಡಿಮಠ, ಸದಸ್ಯರು, ಸಂಯೋಜಕರು, ಕನಕ ಅಧ್ಯಯನ ಪೀಠ, ಕವಿವಿ ಧಾರವಾಡ.

ಕುಲಸಚಿವರು

ಸಾದರಪೂರ್ವಕ ಪ್ರತಿ:

1. ಡಾ. ಬಿ.ಎಲ್. ನಡೋಣಿ, ಡೀನರು, ಕಲಾ ನಿಕಾಯ, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ.
2. ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ., ಧಾರವಾಡ.

ಪ್ರತಿಗಳು:

1. ಕುಲಸಚಿವರ, ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಕುಲಸಚಿವರ(ಮೌಲ್ಯಮಾಪನ), ಆಪ್ತ ಕಾರ್ಯದರ್ಶಿಗಳು, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.
3. ಅಧೀಕ್ಷಕರು, ವಿದ್ಯಾಮಂಡಳ (ಪಿಜಿ/ಸಿಆರ್‌ಪಿ/ಪಿಎಚ್.ಡಿ)ವಿಭಾಗ, ಕ.ವಿ.ವಿ.ಧಾರವಾಡ.
4. ಅಧೀಕ್ಷಕರು, ಪರೀಕ್ಷಾ (ಗೌಪ್ಯ) ವಿಭಾಗ, ಕ.ವಿ.ವಿ.ಧಾರವಾಡ.
5. ಅಧೀಕ್ಷಕರು, ಪರೀಕ್ಷಾ (ಪ್ರಶ್ನೆಪತ್ರಿಕೆ) ವಿಭಾಗ, ಕ.ವಿ.ವಿ.ಧಾರವಾಡ.
6. ಅಧೀಕ್ಷಕರು, ಪರೀಕ್ಷಾ (UG/PG) ವಿಭಾಗ, ಕ.ವಿ.ವಿ.ಧಾರವಾಡ.

Scanned with Oken Scanner